# ಪ್ರಗತಿ ವಿದ್ಯಾಲಯ ಆಂಗ್ಲಮಾಧ್ಯಮ ಶಾಲೆ ಮೂರೂರು

## 2018-19 ನೇ ಸಾಲಿನ ಕ್ರೀಡಾ ಪ್ರತಿಭೆಗಳು



ಮಿರ್ಜಾನ ವಲಯ ಮಟ್ಟದ ಕ್ರೀಡಾ ಕೂಟದಲ್ಲಿ ವೈಯಕ್ತಿಕ ಮತ್ತು ಗುಂಪು ಆಟದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕಾ ಹಂತದಲ್ಲಿ ಪ್ರತಿನಿಧಿಸಿದ ವಿಜೇತ ವಿದ್ಯಾರ್ಥಿಗಳು



ಕಾರವಾರದಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರೌಢ ಶಾಲಾ ವಿಭಾಗದ ಕ್ರೀಡಾ ಕೂಟದಲ್ಲಿ ಕುಮಾರಿ ಅಶ್ವಿನಿ ಜಿ. ಹೆಗಡೆ 10 ನೇ ವರ್ಗ, ಬಲ್ಲೆ ಎಸೆತ, ಮತ್ತು ಕುಮಾರಿ ಸ್ಮಿತಾ ಜಿ. ಹೆಗಡೆ 10 ನೇ ವರ್ಗ, ಗುಂಡು ಹಾಗೂ ಚಕ್ರ ಎಸೆತ ಸ್ಪರ್ಧೆಯಲ್ಲಿ ಜಿಲ್ಲಾ ಹಂತವನ್ನು ಪ್ರತಿನಿಧಿಸಿ ಶಾಲೆಗೆ ಕೀರ್ತಿ ತಂದಿರುತ್ತಾರೆ.



ಪ್ರೌಢ ಶಾಲಾ ಟಿ. ಜಿ. ಟಿ. ವಿಭಾಗದ ಕ್ರೀಡಾ ಕೂಟದಲ್ಲಿ
ಕುಮಾರಿ ಹರ್ಷಿತಾ ಎನ್. ಹೆಗಡೆ 8ನೇ ವರ್ಗ
ಗುಂಡು ಎಸೆತ ಮತ್ತು ಕುಮಾರಿ ಜೀಕ್ಷಿತಾ ವಿ. ಹರಿಕಾಂತ 8 ನೇ ವರ್ಗ,
ಚಕ್ರ ಎಸೆತ ಸ್ಪರ್ಧೆಯಲ್ಲಿ ಜಿಲ್ಲಾ ಹಂತವನ್ನು ಪ್ರತಿನಿಧಿಸಿರುತ್ತಾರೆ.



ಕಾರವಾರದ ಮಾಲಾದೇವಿ ಕ್ರೀಡಾಂಗಣದಲ್ಲಿ ನಡೆದ ಪ್ರೌಢ ಶಾಲಾ ಬಾಲಕಿಯರ ಥ್ರೋ ಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಪ್ರಥಮ ಬಾರಿ ಬೆಳಗಾವಿ ವಿಭಾಗ ಮಟ್ಟದ ಕ್ರೀಡಾ ಕೂಟದಲ್ಲಿ ಪ್ರತಿನಿಧಿಸಿ ಶಾಲೆ, ಸಂಸ್ಥೆ, ತಾಲೂಕು, ಮತ್ತು ಜಿಲ್ಲೆಗೆ ಕೀರ್ತಿ ತಂದ ವಿಜೇತ ವಿದ್ಯಾರ್ಥಿನಿಯರು.



ಕುಮಾರ ಅಭಿ ಆರ್. ಅಡಿಗುಂಡಿ 10 ನೇ ವರ್ಗ.

2016-17 ನೇ ಸಾಲಿನಲ್ಲಿ ಚಕ್ರ ಎಸೆತ ಸ್ಪರ್ಧೆಯಿಂದ ಪೂನಾದಲ್ಲಿ ನಡೆದ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಪ್ರತಿನಿಧಿಸಿ, ಮಂಡ್ಯದಲ್ಲಿ ನಡೆದ 2018-19 ನೇ ಸಾಲಿನ ಪ್ರೌಢ ಶಾಲಾ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಚಕ್ರ ಹಾಗೂ ಭರ್ಜಿ ಎಸೆತ ಸ್ಪರ್ಧೆಯಲ್ಲಿ ಪ್ರತಿನಿಧಿಸಿ ಏಕ ಮಾತ್ರ ಚಕ್ರ ಎಸೆತ ಸ್ಪರ್ಧೆಯಲ್ಲಿ 39-75 ಮೀ. ಎಸೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಪ್ರತಿನಿಧಿಸಿರುತ್ತಾನೆ. ಮತ್ತು ಅಮೆಚೂರ್ ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾದವರು ನಡೆಸಿದ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು ಆಂಧ್ರ ಪ್ರದೇಶದ ತಿರುಪತಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಪ್ರತಿನಿಧಿಸಿ ಸತತ 3 ಬಾರಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ನಮ್ಮ ಜಿಲ್ಲೆಯಲ್ಲಿಯೇ ಇತಿಹಾಸ ನಿರ್ಮಿಸಿ ನಮ್ಮ ಸಂಸ್ಥೆ, ಶಾಲೆ, ತಾಲೂಕು, ಜಿಲ್ಲೆ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿರುತ್ತಾನೆ. ಈತನಿಗೆ "ಕೊಂಕಣ ಭೂಷಣ" ಪ್ರಶಸ್ತಿಯೂ ಲಭಿಸಿರುತ್ತದೆ.



ಕುಮಾರ ರೋಹನ್ ಎಮ್. ನಾಯ್ಕ 9 ನೇ ವರ್ಗ ಮಂಡ್ಯದಲ್ಲಿ ನಡೆದ ರಾಜ್ಯ ಮಟ್ಟದ ಪ್ರೌಢ ಶಾಲಾ ವಿಭಾಗದ ಚಕ್ರ ಎಸೆತ ಸ್ಪರ್ಧೆಯಲ್ಲಿ ರಾಜ್ಯ ಹಂತವನ್ನು ಪ್ರತಿನಿಧಿಸಿ 4 ನೇ ಸ್ಥಾನ ಪಡೆಯುವುದರೊಂದಿಗೆ ಸತತ 2 ನೇ ಬಾರಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಿ ಶಾಲೆ, ಸಂಸ್ಥೆ, ತಾಲೂಕು, ಮತ್ತು ಜಿಲ್ಲೆಗೆ ಕೀರ್ತಿ ತಂದು ಗಮನಾರ್ಹ ಸಾಧನೆ ಗೈದ ವಿದ್ಯಾರ್ಥಿ.



ಕುಮಾರ ಅಕ್ಷಯ ಎಮ್. ಭಟ್ಟ. 10 ನೇ ವರ್ಗ 2018-19 ನೇ ಸಾಲಿನ ಕ್ರಿಯಾಶೀಲ ಕ್ರೀಡಾ ಮಂತ್ರಿ ಹಾಗೂ ಕ್ರಿಯಾಶೀಲ ವಿದ್ಯಾರ್ಥಿ. ಈತನಿಗೆ "ವರುಷದ ಹರುಷ" ಶಾಲಾ ವಾರ್ಷಿಕೋತ್ಸವದ ವೇದಿಕೆಯಲ್ಲಿ ಪ್ರಗತಿ ವಿದ್ಯಾಲಯದ ಕ್ರಿಯಾಶೀಲ ವಿದ್ಯಾರ್ಥಿ ಪ್ರಶಸ್ತಿ ಲಭಿಸಿದೆ.



ಕುಮಾರ ವಿಕಾಸ ಅನಂತ ಹೆಗಡೆ 8 ನೇ ವರ್ಗ ಪ್ರೌಢ ಶಾಲಾ ಟಿ. ಜಿ. ಟಿ. ವಿಭಾಗದ ಚದುರಂಗ ಸ್ಪರ್ಧೆಯಲ್ಲಿ ಜಿಲ್ಲಾ ಹಂತವನ್ನು ಪ್ರತಿನಿಧಿಸಿ ಶಾಲೆ, ಸಂಸ್ಥೆ, ಹಾಗೂ ತಾಲೂಕಿಗೆ ಕೀರ್ತಿ ತಂದ ವಿದ್ಯಾರ್ಥಿ.